**<u>ಸಾಕ್ಷಿಯನ್ನು ಈ ದಿನ ದಿಃ 20.03.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>**ದಿಃ 24.01.2024 ರಂದು ಮಾಡಿದ ಆದೇಶದಂತೆ ಸಾಕ್ಷಿಯ** ಪಾಟೀ ಸವಾಲುಃ</u>

<u>ಆರೋಪಿ ಪರ ವಕೀಲರಿಂದಃ</u>

1. ನಿಪಿ 1 ದೂರಿನ ಮೇಲೆ ನನ್ನ ಸಹಿ ಇರುತ್ತದೆ ಎನ್ನುವುದು ಸರಿ. ಅದನ್ನು ಪೋಲೀಸರು ಬರೆದರು. ದೂರಿನಲ್ಲಿ ಏನನ್ನು ಬರೆಯಲಾಗಿದೆ ಎನ್ನುವುದು ನನಗೆ ಗೊತ್ತಿಲ್ಲ ಎನ್ನುವುದು ಸರಿ. ನಾನು 29.07.2021 ರಂದು ಸಂಜೆ 06.00 ಗಂಟೆಗೆ ಕೆಲಸಕ್ಕೆ ಹೋಗಿದ್ದೆ. ನಾನು ವಾಪಾಸ್ಸು ಬಂದಾಗ ನನ್ನ ತಾಯಿ ಮೃತ ಪಟ್ಟಿದ್ದರು. ಅವರ ಶವವನ್ನು ನನ್ನ ತಮ್ಮ ಆರೋಪಿಯ ಮನೆಯ ಜಗುಲಿಯ ಮೇಲೆ ಇಟ್ಟಿದ್ದರು. ಪೋಲೀಸರು ಸ್ಥಳಕ್ಕೆ ಸಂಜೆ 05.30 ರಿಂದ 06.00 ಗಂಟೆಯ ಸಮಯಕ್ಕೆ ಬಂದಿದ್ದರು. ನಾನು ಬರುವ ಮುಂಚೆಯೇ ಪೋಲೀಸರು ಸ್ಥಳಕ್ಕೆ ಬಂದಿದ್ದರು. ಅಲ್ಲಿ ಗ್ರಾಮಸ್ಥರು , ನನ್ನ ತಮ್ಮ ಮಹೇಶನೇ ನನ್ನ ತಾಯಿಯನ್ನು ಹೊಡೆದು ಸಾಯಿಸಿರುತ್ತಾನೆ ಎಂದು ಮಾತನಾಡಿಕೊಳ್ಳುತ್ತಿದ್ದರು. ಅವರ ಹೆಸರುಗಳನ್ನು ಹೇಳಲಾಗುವುದಿಲ್ಲ. ಆರೋಪಿ ಮಹೇಶನ ಮನೆಯ ಎದುರು ಮಹದೇವ ಪ್ರಸಾದ್ ರವರ ಮನೆ ಇರುತ್ತದೆ. ಅವರ ಮನೆಯಲ್ಲಿ ಹೆಂಡತಿ ಮಕ್ಕಳು , ಅತ್ತೆ ಮಾವ ಇದ್ದಾರೆ. ಅವರು ಸಂಜೆಯ ಸಮಯದಲ್ಲಿ ಮನೆಯ ಮುಂದಿನ ಜಗುಲಿಯ ಮೇಲೆ ಕುಳಿತು ಮಾತನಾಡುತ್ತಿರುತ್ತಾರೆ ಎನ್ನುವುದು ಸರಿ. ಪೋಲೀಸ್ ಜೀಪಿನಲ್ಲಿ ನನ್ನ ತಾಯಿಯ ಶವವನ್ನು ಟಿ ನರಸೀಪುರಕ್ಕೆ ತೆಗೆದುಕೊಂಡು

ಹೋದರು. ನಾನು ಪೋಲೀಸ್ ಠಾಣೆಗೆ ಹೋದಾಗ ರಾತ್ರಿ 09.00 ಗಂಟೆ ಆಗಿತ್ತು. ಅವರು ಬರೆದಿದ್ದ ಬರವಣಿಗೆಗೆ ನಾನು ಸಹಿ ಹಾಕಿದೆ.

2. ಎಂ ಒ 1 ದೊಣ್ಣೆಯನ್ನು ಕಳೆದ ಬಾರಿ ನಾನು ನ್ಯಾಯಾಲಯಕ್ಕೆ ಬಂದಿದ್ದಾಗ ಮೊದಲ ಬಾರಿಗೆ ನೋಡಿದ್ದೆ ಎನ್ನುವುದು ಸರಿ . ಎಂ ಒ 2 ನ್ನು ಸಹ ಕಳೆದ ಬಾರಿ ನಾನು ನ್ಯಾಯಾಲಯಕ್ಕೆ ಬಂದಿದ್ದಾಗ ಮೊದಲ ಬಾರಿಗೆ ನೋಡಿದ್ದೆ ಎನ್ನುವುದು ಸರಿ. ನಿಪಿ 2 ಮಹಜರ್ ಗೆ ನಾನು ಎಲ್ಲಿ ಸಹಿ ಹಾಕಿರುತ್ತೇನೆ ಎನ್ನುವುದು ನನಗೆ ಗೊತ್ತಿಲ್ಲ.

3. ನಿಮ್ಮ ತಾಯಿಯವರು ಬಿದ್ದು ಸತ್ತು ಹೋಗಿರುತ್ತಾರೆ ಎಂದು ಮಾತನಾಡಿಕೊಳ್ಳುತ್ತಿದ್ದರು ಎಂದು ಮಾಡಿದ ಸಲಹೆಗೆ ಸಾಕ್ಷಿ , ಹಾಗೆ ಮಾತನಾಡಿಕೊಳ್ಳುತ್ತಿದ್ದರು ಎನ್ನುತ್ತಾರೆ.

<u>ಮರು ವಿಚಾರಣೆ ಃ ಇಲ್ಲ</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**